# ಶಾಲ್ಮಲೆ ಹರಸಿದ ದೇವರಹೊಳೆ



ಶಿರಸಿಯ ಸಮೀಪದ 'ದೇವರಹೊಳೆ' ಪ್ರಕೃತಿಯ ಆಸ್ತಿಕ ಅಭಿವ್ಯಕ್ತಿಯಂತಿದೆ. ಮೋಹಕ ಕಾಡು, ಸಾವಧಾನವಾಗಿ ಹರಿಯುವ ಹೊಳೆ ಹಾಗೂ ಹಕ್ಕಿಗಳ ಹಿಮ್ಮೇಳ ಸೇರಿಕೊಂಡು 'ದೇವರಹೊಳೆ' ಸಹೃದಯರ ಮೈಮನ ಸೂರೆಗೊಳ್ಳುತ್ತದೆ.

■ ಅರ್ಚನಾ ಬೊಮ್ನಳ್ಳಿ



ಶಾಲ್ಮಲೆ ಹರಸಿದ ದೇವರಹೊಳೆ

ಉತ್ತರ ಕನ್ನಡ ಜಿಲ್ಲೆ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರುವಾಸಿ. 'ಕಾಡ ನೋಡ ಹೋಗಿ ಕವಿತೆಯೊಡನೆ ಬಂದೆ' ಎಂದು ಪ್ರವಾಸಿಗರ ಮನಸ್ಸಿನಲ್ಲಿ ಸೌಂದರ್ಯಾನುಭೂತಿಯನ್ನು ಉಂಟುಮಾಡುವ ನಾಡು.

ನೋಟ ಸೋಲುವಷ್ಟೂ ಉದ್ದಕ್ಕೆ ಕಾಣಿಸುವ ವನರಾಶಿ. ಕಾಡಿನ ನಡುವೆ ಬೆಳ್ಳಿರೇಖೆಗಳಂತೆ ಹರಿಯುವ ಹೊಳೆ–ಕೊಳ್ಳಗಳು. ನೆಲದ ಚುಂಬಕಶಕ್ತಿಗೆ ಸಿಲುಕಿದಂತೆ ಧುಮ್ಮಿಕ್ಕುವ ಜಲಪಾತಗಳು. ಹೀಗೆ, ಉತ್ತರಕನ್ನಡ ಎಂದರೆ ಅದು ಪ್ರಾಕೃತಿಕ ಸೌಂದರ್ಯಕ್ಕೆ ಇನ್ನೊಂದು ಹೆಸರು. ಜಿಲ್ಲೆಯ ಈ ಚೆಲುವಿನ ಒಂದು ತುಣುಕಿನಂತೆ ಕಾಣಿಸುವಂತಹದ್ದು ಶಾಲ್ಮಲಾ ನದಿ. ಅಡಿಕೆ, ತೆಂಗು, ಬಾಳೆ ತೋಟಗಳನ್ನು ಪೊರೆಯುತ್ತಾ ಹರಿಯುವ ನದಿ ನೋಡುಗರ ಕಣ್ಮನಸ್ಸುಗಳಿಗೆ ಮುದ ನೀಡುವಂತಹದ್ದು. ಈ ಭಾಗದ ಜನರ ಜೀವನಾಡಿಯಾಗಿ ಗುರ್ತಿಸಿಕೊಂಡಿರುವ ಶಾಲ್ಮಲಾ ಪ್ರವಾಸಿಗರ ಪಾಲಿನ ಕಣ್ಮಣಿಯೂ ಹೌದು.

ಶಾಲ್ಮಲಾ ನದಿ ಸುಮ್ಮನೆ ಹರಿಯುವವಳಲ್ಲ. ತನ್ನ ನಡಿಗೆಯುದ್ದಕ್ಕೂ ಹಲವು ಹೊಳೆ, ಝರಿಗಳನ್ನು ತನ್ನೊಂದಿಗೆ ಸೇರಿಸಿಕೊಳ್ಳುತ್ತಾ ಸಾಗುವ ಸಹನಡಿಗೆ ಅವಳದು. ಹೀಗೆ ಸೇರಿಕೊಳ್ಳುವ ಹೊಳೆಗಳಲ್ಲೊಂದು – 'ದೇವರಹೊಳೆ'. ದೇವದಕೇರಿ ಎನ್ನುವ ಪ್ರದೇಶದ ಬಳಿ ಹರಿಯುವ ಕಾರಣದಿಂದಲೋ ಏನೋ ಇದಕ್ಕೆ 'ದೇವರಹೊಳೆ' ಎನ್ನುವ ಹೆಸರು. ಉತ್ತರಕನ್ನಡದಲ್ಲಿ ನೂರಾರು ಅನಾಮಿಕ ಜಲಧಾರೆಗಳು, ಸೌಂದರ್ಯದ ಸನ್ನಿಧಿ ಎನ್ನಬಹುದಾದ ಸ್ಥಳಗಳೂ ಇವೆ. ಇವೆಲ್ಲದರ ನಡುವೆ 'ದೇವರಹೊಳೆ' ತನ್ನದೇ ಆದ ಅನನ್ಯತೆಯಿಂದ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿದೆ.

(8ನೇ ಪುಟ ನೋಡಿ)